## ‘ಮಾಯಾಮೃಗ’ ಸಂವಾದ ಮತ್ತೆ ನಡೆಯಲಿ

ಸಿರಿ ಕನ್ನಡ ವಾಹಿನಿಯ ‘ಮತ್ತೆ ಮಾಯಾಮೃಗ’ ಇತ್ತೀಚೆಗೆ ಸ್ವಲ್ಪ ವೇಗವನ್ನು ಪಡೆದುಕೊಂಡಿದೆ. ಪ್ರಸ್ತುತ ಮೂರು ಬೇರೆ ಬೇರೆ ಕುಟುಂಬಗಳ ಕಥೆ ಬಿತ್ತರವಾಗುತ್ತಿದೆ. ಶಂಕರ್ ಅಶ್ವಥ್, ಜಯಶ್ರೀ ನಿರ್ವಹಿಸುತ್ತಿದ್ದ ಪಾತ್ರಗಳ ಕಥೆಯೇ ಸುಮಾರು ದಿನಗಳಿಂದ ಮಾಯವಾಗಿದೆ. ಹಾಗೆಯೇ ಆದಷ್ಟು ಬೇಗ ಸಿಎಸ್‌ಪಿ ಪಾತ್ರವೂ ಪ್ರತ್ಯಕ್ಷ ಆಗಲಿ. ವೀಕ್ಷಕರೊಂದಿಗಿನ ಸಂವಾದ ಕೂಡ ಪ್ರಾರಂಭವಾಗಲಿ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ಕೀರ್ತಿಗೆ ಬೇಕು ಹೊಸ ಪೋಷಾಕು

ಕಲರ್ಸ್ ಕನ್ನಡದ ‘ಲಕ್ಷ್ಮೀ ಬಾರಮ್ಮ’ ಧಾರಾವಾಹಿಯ ಕೀರ್ತಿ ಪಾತ್ರದ ನಡವಳಿಕೆ ಕೌಟುಂಬಿಕ ಪ್ರೇಕ್ಷಕರಿಗೆ ಕಿರಿಕಿರಿ ಅನ್ನಿಸುತ್ತದೆ. ಈ ಪಾತ್ರವನ್ನು ನಿರ್ದೇಶಕರು ಯಾವ ಕಾರಣಕ್ಕೆ ಪೋಷಿಸುತ್ತಿದ್ದಾರೆ ಎನ್ನುವುದು ಯಕ್ಷಪ್ರಶ್ನೆಯಾಗಿದೆ. ದಯವಿಟ್ಟು ಈ ಪಾತ್ರಕ್ಕೆ ಒಂದು ಸದಭಿರುಚಿಯ ಆಯಾಮ ಕಲ್ಪಿಸಲಿ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ಹಾಸ್ಯ ಚಕ್ರವರ್ತಿ ಮರೆತರೆ ಹ್ಯಾಂಗ

ಕನ್ನಡ ಚಿತ್ರರಂಗ ಕಂಡ ಅಪ್ರತಿಮ ಹಾಸ್ಯ ಕಲಾವಿದ ನರಸಿಂಹರಾಜು ಅವರ 100ನೇ ವರ್ಷದ ಜನ್ಮದಿನ ಇತ್ತೀಚೆಗೆ ನೆರವೇರಿತು. ರಾಜ್‌ಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣರ ಸಮಕಾಲೀನರಾಗಿ ಚಿತ್ರರಂಗ ಪ್ರವೇಶಿಸಿದ ಅವರು ವಿಶಿಷ್ಟ ಹಾಸ್ಯದ ಮೂಲಕ ಚಿತ್ರರಸಿಕರ ಮನೆ, ಮನ ಗೆದ್ದವರು. ಇಂತಹ ಅಪರೂಪದ ನಟನನ್ನು ಕನ್ನಡ ವಾಹಿನಿಗಳು ಸಂಪೂರ್ಣ ಮರೆತೇಬಿಟ್ಟದ್ದು ಬೇಸರ ಅನ್ನಿಸುತ್ತದೆ. ವೀಕೆಂಡ್ ಸ್ಪೆಷಲ್ ಕಾರ್ಯಕ್ರಮವನ್ನು ರೂಪಿಸಬಹುದಿತ್ತು. ಕೊನೆಪಕ್ಷ ‘ಚಂದನ’ದಲ್ಲಿ ವಾರ್ತಾ ಮತ್ತು ಪ್ರಸಾರ ಇಲಾಖೆ ತಯಾರಿಸಿರುವ ನರಸಿಂಹರಾಜು ಅವರ ಡಾಕ್ಯುಮೆಂಟರಿಯನ್ನಾದರೂ ಪ್ರಸಾರ ಮಾಡಬಹುದಿತ್ತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ವಾರದ ಪತ್ರ

## ಕುತೂಹಲಕರ ಅವಾಸ್ತವಿಕ ಕಥನ

ಗಂಧರ್ವ ಕನ್ಯೆ ಆಮ್ರಪಾಲಿ, ಗಂಧರ್ವ ರಾಜಕುಮಾರ ಪ್ರದ್ಯುಮ್ನ. ಗಂಧರ್ವ ಕನ್ಯೆ, ರಾಜಕುಮಾರನನ್ನು ಹುಡುಕಿಕೊಂಡು ಭೂಲೋಕಕ್ಕೆ ಬಂದಿದ್ದಾಳೆ. ಅವಳಿಗೆ ಅಪಘಾತವಾಗಿ ಅರಸು ಕುಟುಂಬದಲ್ಲಿ ಆಶ್ರಯ ಪಡೆದಿದ್ದಾಳೆ. ದೇವಯಾನಿ ವಿಷ ಸೇವಿಸಿದಾಗ ಆಮ್ರಪಾಲಿ ಅವಳ ದೇಹವನ್ನು ಸ್ಪರ್ಶಿಸದೇ ವಿಷವನ್ನು ಹೀರಿಕೊಳ್ಳುತ್ತಾಳೆ. ಇತ್ತೀಚೆಗೆ ಕಥೆಯಲ್ಲಿ ಮಂತ್ರವಾದಿಯೊಬ್ಬನ ಪ್ರವೇಶವೂ ಆಗಿದೆ. ಇಷ್ಟೆಲ್ಲ ಅವಾಸ್ತವಿಕ ಸಂಗತಿಗಳಿದ್ದರೂ ಕಲರ್ಸ್ ಕನ್ನಡದ ‘ತ್ರಿಪುರ ಸುಂದರಿ’ ಧಾರಾವಾಹಿ ಮುಂದೇನಾಗುತ್ತದೆಯೋ ಎಂಬ ಕುತೂಹಲವನ್ನು ವೀಕ್ಷಕರಲ್ಲಿ ಮೂಡಿಸುತ್ತಿದೆಯಲ್ಲ, ಅದು ಅದರ ಪ್ಲಸ್ ಪಾಯಿಂಟ್.

—ಮುರಲೀಧರ ಕುಲಕರ್ಣಿ, ಬೀದರ್

## ಬಹುಮಾನ ಎಂಬ ಲಾಟರಿ

ಸಿರಿ ಕನ್ನಡದ ‘ಸಖತ್ ಜೋಡಿ’ ಚೆನ್ನಾಗಿದೆ. ಹೊಸ ನಟ ನಟಿಯರನ್ನು ಪರಿಚಯಿಸುವುದು ಉತ್ತಮ ಕೆಲಸ. ಇದು ಒಂದೂವರೆ ತಾಸಿನ ಕಾರ್ಯಕ್ರಮ. ಹೆಚ್ಚು ಅಂಕಗಳನ್ನು ಪಡೆದ ಸ್ಪರ್ಧಿಗಳಿಗೆ ಎಲೆಕ್ಟ್ರಿಕ್ ಸ್ಕೂಟರ್ ಬಹುಮಾನವಾಗಿ ನೀಡುವುದು ಸಂತೋಷ ಸಂಗತಿ. ಅದಕ್ಕೂ ಕಠಿಣ ಪರೀಕ್ಷೆ. ಸ್ಕೂಟರಿನ 10 ಕೀಗಳಲ್ಲಿ ನಿಖರವಾದ ಕೀಯನ್ನು ಗುರುತಿಸಿದರೆ ಮಾತ್ರ ಸ್ಕೂಟರ್! ಇದು ಒಂದು ಲಾಟರಿ ಇದ್ದ ಹಾಗಿದೆ.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ಪ್ರಶ್ನೆಗಳೇ ಸುದ್ದಿ! ಉತ್ತರ ಎಲ್ಲಿ?

ಸುದ್ದಿ ವಾಹಿನಿಗಳು ರಾಜಕೀಯ ವಿಶ್ಲೇಷಣೆಯಲ್ಲಿ ಅತಿ ಹೆಚ್ಚು ಪ್ರಶ್ನಾರ್ಥಕ ವಾಕ್ಯಗಳನ್ನು ಬಳಸುತ್ತಿವೆ. ಅದರಲ್ಲಿ ಅಂತೆಕಂತೆಗಳು, ವದಂತಿಗಳು ಮತ್ತು ಊಹಾಪೋಹಗಳೇ ತುಂಬಿರುತ್ತವೆ. ವಾಸ್ತವವನ್ನು ತಿಳಿಸದೆ, ಇರದಿರುವುದನ್ನು ಇದ್ದಂತೆ ಕಲ್ಪಿಸುವುದು, ತಿರುಚುವುದು ಸಾಮಾನ್ಯವಾಗಿದೆ. ಒಬ್ಬ ರಾಜಕಾರಣಿ ಇನ್ನೊಬ್ಬ ರಾಜಕಾರಣಿಯನ್ನು ಆಕಸ್ಮಾತ್ ಭೇಟಿಯಾದರೆ, ಕೈಕುಲುಕಿದರೆ, ಫೋನಾಯಿಸಿದರೆ ಏನನ್ನೋ ಕಲ್ಪಿಸಿ ದೊಡ್ಡ ರಾಜಕೀಯ ವಿಪ್ಲವ, ಬದಲಾವಣೆ ಆಗುತ್ತಿರುವಂತೆ ಬಿಂಬಿಸಲಾಗುತ್ತದೆ. ಸುದ್ದಿಯನ್ನು ರೋಚಕಗೊಳಿಸಲು ಅಡ್ಡದಾರಿ ಸರಿಯಲ್ಲ.

—ರಮಾನಂದ ಶರ್ಮಾ, ಬೆಂಗಳೂರು

## ರಾಜಕೀಯದ ಕೊನೆಯ ತಾಣ ಟೀವಿ!

ಬಹುತೇಕ ಸುದ್ದಿ ವಾಹಿನಿಗಳು ರಾಜಕೀಯ ಸುದ್ದಿಗಳನ್ನೇ ನಿರಂತರವಾಗಿ ಪ್ರಸಾರ ಮಾಡುತ್ತಿವೆ. ಎಲ್ಲೋ ಅಪಘಾತ ಅಥವಾ ಸಿನಿಮಾ ಸೆಲೆಬ್ರಿಟಿಗಳ ಖಾಸಗಿ ವಿಚಾರ ಬಿಟ್ಟರೆ ಮುಕ್ಕಾಲು ಪಾಲು ರಾಜಕೀಯ ಸಂಬಂಧಿ ಸುದ್ದಿಗೆ ಪ್ರಾಮುಖ್ಯತೆ ನೀಡುತ್ತಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರವಂತೂ ‘ಗ್ಯಾರಂಟಿ’ ವಿಷಯಗಳೇ ಖಾತ್ರಿಯಾಗಿವೆ. ಜೊತೆಗೆ, ಆ ಪಕ್ಷದ ನಾಯಕರನ್ನು ಜರಿಯುವುದೇ ಮುಖ್ಯವಾಗಿದೆ. ಇಂದು ಬರ್ನಾರ್ಡ್ ಶಾ ಬದುಕಿದ್ದಿದ್ದರೆ ‘politics is the first and foremost resort of news channels’ ಎಂದು ಹೇಳುತ್ತಿದ್ದರೇನೋ?

—ಹೆಚ್.ವಿ. ಶ್ರೀಧರ್, ಬೆಂಗಳೂರು

## ನೆನಪಿನಲ್ಲುಳಿದ ಜುಗಲಬಂದಿಯ ಸೊಗಸು

ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಿರುವ ಚಂದನ ವಾಹಿನಿಯ ‘ಮರೆಯದ ಮಾಣಿಕ್ಯ’ ಭಿನ್ನವಾದ ಕಾರ್ಯಕ್ರಮ. ಅಶ್ವಿನಿ ಕೌಶಿಕ್ ಮತ್ತು ಸುಮಾರಾಣಿ ಅವರ ಜುಗಲಬಂದಿ– ಕೊಳಲು ಮತ್ತು ಸಿತಾರ್ ವಾದನ– ತುಂಬಾ ಚೆನ್ನಾಗಿ ಮೂಡಿಬಂತು. ರಾಜನ್ ನಾಗೇಂದ್ರ ಅವರ ಕನ್ನಡ ಚಿತ್ರಗೀತೆಗಳಿಗೆ ಇವರು ವಾದ್ಯ ನುಡಿಸಿದ್ದು ಮನಮೋಹಕವಾಗಿತ್ತು.

—ಶ್ರೀಧರ ರಾಯಸಂ, ಬೆಂಗಳೂರು

## ಅರ್ಥಪೂರ್ಣ ವಚನ ವಿವರ

ಶ್ರೀ ಬಸವ ವಾಹಿನಿಯಲ್ಲಿ ಜೀವನಕ್ಕೆ ಹತ್ತಿರ ಎನಿಸುವ ಬಸವಣ್ಣನವರ ವಚನಗಳ ವಿವರಣೆ ನೀಡುತ್ತಿದ್ದಾರೆ. ಆರೋಗ್ಯಕ್ಕೆ ಪೂರಕವಾಗುವ ಅಡುಗೆ ಕಾರ್ಯಕ್ರಮ, ಯೋಗ, ಮನಸಿಗೆ ಹಿತ ನೀಡುವ ಪ್ರವಚನ ಚೆನ್ನಾಗಿ ಮೂಡಿಬರುತ್ತಿದೆ. ಭಾನುವಾರ ಪ್ರಸಾರವಾಗುವ ಹಳೆಯ ಸುಮಧುರ ಚಿತ್ರಗೀತೆಗಳನ್ನು ಒಂದೊಳ್ಳೆಯ ಕಾರ್ಯಕ್ರಮ ಅನ್ನಬಹುದು.

—ಭಾರತೀ ಗಂಗಾಧರ್, ಬೆಂಗಳೂರು